ಶ್ರೀ ಪಿ. ಎಂ. ಬಂಗಿ.—ಹಾಗಿದ್ದಪಕ್ಷದಲ್ಲಿ ಇದು ಎರಡ್ನಾ ನೌಕರರಿಗೂ ಅನ್ವಯಿಸುತ್ತದೆಯೇ ?

ಶ್ರೀ ಬಿ. ಬಸವಲಿಂಗಪ್ಪ.—ನಮಗ್ರಹವಾಗಿ ಎರಡ್ನಾ ನೌಕರರಿಗೂ ಇದು ಅನ್ವಯಿಸುತ್ತದೆ. ಹಿಂದೆ ಬೊಂಬಾಯಿ ಕರ್ನಾಟಕ ಏರಿಯಾದೋಳಗೆ ಯಾವಾಗ ಬೊಂಬಾಯಿ ಮುನಿಸಿಪಲ್ ಕೆಲಸಗಳು ಪ್ರಾರಂಭವಾಯಿತೋ ಆಗಿನಿಂದಲೂ ಆ ಕೆಲಸಗಳನ್ನು ಮಾಡುವವರಿಗೆಲ್ಲರಿಗೂ ಆ ಅಕ್ಟ್ಸ್ ರಿಪೀಲ್ ಆಗಿದೆ. 1964ನೇ ಇಸವಿಯ ಮುನಿಸಿಪಾಲಿಟಿ ಆಕ್ಟ್‌ನೊಳಗೆ ಅಡ್ಜಸ್ಟ್‌ಮೆಂಟ್ ರೂಲ್ಸ್ ಮಾಡಿದ್ದಾರೆ. ಅದರ ಪ್ರಕಾರ 55 ವರ್ಷಗಳೆಂದು ಇದೆ. ಅದ್ದರಿಂದ ಅದಕ್ಕಿಂತ ಜಾಸ್ತಿಯಾಗಿ ಕೊಡುವುದಕ್ಕಾಗುವುದಿಲ್ಲ.

ಶ್ರೀ ಸಿ. ಬೈರೇಗೌಡ.—ಈ ಒಂದು ಪ್ರಾವಿಷನ್ ಬೇರೆ ಒಂದು ಮುನಿಸಿಪಾಲಿಟಿಯಲ್ಲಿ ಕಾರ್ಯರೂಪಕ್ಕೆ ತರುತ್ತಾ ಇರುವಾಗ, ಇತರ ಕಡೆಗಳಲ್ಲಿಯೂ ಆ ರೀತಿಯಾಗಿ ಜಾರಿಗೆ ತರುವುದಕ್ಕೆ ಆಗುವುದಿಲ್ಲವೆನ್ನುವುದಕ್ಕೆ ಕಾರಣವೇನು ? ಕಾನೂನು ಪ್ರಕಾರ ಅಲ್ಲರತಕ್ಕ ಮುನಿಸಿಪಲ್ ಕೆಲಸಗಾರರಿಗೆ ರೆಂಟ್-ಫ್ರೀ-ಹೌಸ್ ಕೊಡಬೇಕೆಂದಿದೆ, ಅಲ್ಲರತಕ್ಕ ಆಡಳಿತಗಾರರು ಯಾಪುದೇ ಒಂದು ಸೌಲಭ್ಯವನ್ನು ಕೂಡ ಅಲ್ಲಿನ ಕೆಲಸಗಾರರಿಗೆ ಕೊಡುತ್ತಾ ಇಲ್ಲ ಅದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಅವರಿಗೆ ಅಲ್ಲಿನ ಕಾನೂನು ರೀತ್ಯ ಏನೇನು ಸೌಲಭ್ಯಗಳನ್ನ್ನ ಕೊಡಬೇಕೋ ಅವನ್ನೆಲ್ಲಾ ದೊರಕಿಸಿಕೊಡುವುದಕ್ಕೆ ಪ್ರಯತ್ನಪಡುತ್ತೀರಾ ? ಇದನ್ನು ಮಾನವೀಯತೆಯ ದೃಷ್ಟಿಯಿಂದ ನೋಡಿ ಇವತ್ತು ಅಲ್ಲಿ 58 ವರ್ಷಗಳವರೆಗೆ ಅವಕಾಶವಿದ್ದರೂ 55 ಕ್ಕೆ ರಿಜ್ಯೆರ್‌ಮಾಡುವುದರಿಂದ ಮುಂದೆ ಇವರನ್ನು ಪುನಃ ಕೆಲಸಕ್ಕೆ ಕರೆದುಕೊಳ್ಳುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಯಾರಿಗೆ 55 ವರ್ಷ ಮುಸ್ತಾಗಿದೆ ಅಂಥವರನ್ನು ನೌಕರಿಯಲ್ಲಿ ಮುಂದುವರಿಸುವ ಪ್ರಶ್ನೆಯೇ ಉದ್ಭವವಾಗುವುದಿಲ್ಲ. ಇದು ಕೇವಲ ಆ ಬಾಗಲ್ಕೋಟೆ ಒಂದು ಪ್ರದೇಶಕ್ಕೆ ಅನ್ವಯಿಸಿದ್ದಲ್ಲ. ಇಡೀ ಮುಂಬೈ ಕರ್ನಾಟಕ ಪ್ರದೇಶಕ್ಕೆ ಅನ್ವಯವಾಗುತ್ತದೆ. ಆದರೆ ಅವರನ್ನು 55ಕ್ಕೆ ನಿವೃತ್ತಿ ಮಾಡುವುದಾಗಿದ್ದರೂ ಇತ್ತೀಚೆಗೆ ಅವರಿಗೆ ಏನೇನು ಸೌಲಭ್ಯಗಳನ್ನು ಕಲ್ಪಿಸಿದೆ ಅನ್ನುವುದರ ಬಗ್ಗೆ ಇನ್ನು ಒಂದೆರಡು ದಿನಗಳಲ್ಲೇ ಮಾನ್ಯ ಸದಸ್ಯರುಗಳಿಗೆಲ್ಲಾ ಇದರ ಸಂಪೂರ್ಣ ಮಾಹಿತಿಯನ್ನು ಒಳಗೊಂಡ ಒಂದು ಪುಸ್ತಕವನ್ನೇ ಹಂಚರಾಗವುದು.

2-30 P.M.

ಶ್ರೀ ಕೆ. ಶ್ರೀರಾಮುಲು.—ಇನ್ನೂ ಮೊನ್ನೆತಾನೆ ಸುಪ್ರೀಂಕೋರ್ಟಿನ ಶ್ರೇ ನ್ಯಾಯಾಧಿಶರು, ತಮಗೆಲ್ಲರಿಗೂ ಗೊತ್ತಿರುವ ಪ್ರಕಾರ, ನೌಕರಿಯಲ್ಲಿರತಕ್ಕ ವ್ಯಕ್ತಿಯ ಆರೋಗ್ಯ ಚೆನ್ನಾಗಿದ್ದರೆ ಅಂಥವರಿಗೆ 60 ವರ್ಷದವರಿಗೂ ಕೇಲಸದಲ್ಲಿರುವುದಕ್ಕೆ ಅವಕಾಶ ಕೊಡಬಹುದೆಂದು ತಿಳಿಸಿಲ್ಲವೇ ? 60 ರವರೆಗೆ ಅವಕಾಶ ಕೊಟ್ಟರೆ ತೊಂದರೆಯೇನು ?

ಶ್ರೀ ಬಿ, ಬಸವಲಿಂಗಪ್ಪ. —ಅದು ಮಾನ್ಯ ಸದಸ್ಯರ ಒಂದು ಸಲಹೆ ಎನ್ನಬಹುದು.

Tenth Report of the Committee on Private Members' Bills and Resolutions

Presentation

Mr. DEPUTY SPEAKER.—I present the Tenth Report of the Committee on Private Members' Bills and Resolutions.

Sri D. B. KALMANKAR (Afzalpur). —I move :

"That this Assembly agrees with the Tenth Report of the Committee on Private Members' Bills and Resolutions"

Mr. DEPUTY SPEAKER —The question is :

"That this Assembly agrees with the Tenth Report of the Committee on Private Members' Bills and Resolutions"

The Motion was adopted

Alleged Harassment by the Police

ಶ್ರೀ ಕೆ. ಪ್ರಭಾಕರ್ (ವರ್ತೂರು).—ಮಾನ್ಯ ಅಧ್ಯಕ್ಷರೇ, ಫಾರೆಸ್ಟ್ ಕೋಟಾದಲ್ಲಿ ದೊರೆತ ಮರಗಳ ವಿನಿಯೋಗದ ಬಗ್ಗೆ ಅದು ದುರ್ವಿನಿಯೋಗವಾಗುತ್ತಿದೆ ಎಂದು ಪೋಲೀಸಿನವರು ಜನರಿಗೆ ಕೊಡುತ್ತಿರುವ ಕಿರುಕುಳದ ಬಗ್ಗೆ ನಾನು ಒಂದು ಕಾರ್ ಅಟೆನ್‌ಷನ್ ನೋಟೀಸನ್ನು ಮೂರು ದಿನ ಗಳ ಕೆಳಗೆ ಕೊಟ್ಟಿದ್ದೆ. ಆದರೆ ನನಗೇನೂ ಉತ್ತರ ಬರಲಿಲ್ಲ. Innocent people are being arrested by the police. Therefore, immediate action by the Government is necessary.

ಉಪಾಧ್ಯಕ್ಷರು.—ಅದನ್ನು ನೋಡಿನಲಾಗುತ್ತದೆ.

Mysore Appropriation Bill, 1973 and Mysore Appropriation (Vote on Account Bill) 1973

Introduction

Sri N. HUTCHAMASTHY GOWDA (Minister for Revenue).—Madam, I beg to introduce the following Bills :

(1) The Mysore Appropriation Bill, 1973.

(2) The Mysore Appropriation (Vote on Account) Bill, 1973.

MADAM SPEAKER.—The Bills are introduced*

Mysore Appropriation Bill, 1973

Motion to Consider

Sri N. HUTCHAMASTHY GOWDA (Minister for Revenue).—Madam, I beg to move.—

"That the Mysore Appropriation Bill, 1973 be taken into consideration."

MADAM SPEAKER.—Motion moved :—

"That the Mysore Appropriation Bill, 1973 be taken into consideration."

† ಶ್ರೀ ಎಚ್. ಎಸ್. ಸಿದ್ಧಪ್ಪ (ಅರಸೀಕೆರೆ).—ಸನ್ಮಾನ್ಯ ಸಭಾಧ್ಯಕ್ಷರೇ ; ಈಗ ಸಭೆಯ ಮುಂದೆ ಮಂಡಿಸಲಾದ ಮೈಸೂರು ಅಪ್ರೊಪ್ರಿಯೇಷನ್ ಬಿಲ್ಲು ಏನಿದೆ ಇದರಲ್ಲಿ ವಿವಿಧ ಬಾಬುಗಳೂ ಸೇರಿ ಒಟ್ಟು 129 ಕೋಟಿ 70 ಲಕ್ಷ 80 ಸಾವಿರ ರೂಪಾಯಿ ಹಣ ನಾನಾಬಾಬುಗಳಿಗೆ ಬೇಕಾಗಿದೆ, ಇದಕ್ಕೆ ಸಭೆಯ ಅನುಮೋದನೆ ಬೇಕೆಂದು ಕೇಳಿದ್ದಾರೆ.

ನಾನು ಕೊಟ್ಟ ಮೊದಲನೆಯದಾಗಿ ಇಲ್ಲಿ ಅಪ್ರೊಪ್ರಿಯೇಷನ್—ಬಿಲ್ ನಂಬರ್ 2ರಲ್ಲಿ ಇರ ತಕ್ಕ ಡಿಮ್ಯಾಂಡ್ ನಂಬರ್—2 ಬಗ್ಗೆ ಎರಡು ಮಾತುಗಳನ್ನು ಹೇಳಬೇಕಾಗಿದೆ. ಈ ಸಪ್ಲಿಮೆಂಟರಿ ಡಿಮ್ಯಾಂಡಿನಲ್ಲಿ ಲ್ಯಾಂಡ್ ರೆವಿನ್ಯೂ ಬಾಬಿಗೆ 130 ಲಕ್ಷ ರೂಪಾಯಿಗಳು ಬೇಕೆಂದು ಕೇಳಿದ್ದಾರೆ. ಆದರೆ ಸರ್ಕಾರದವರು ಈ ರೆವಿನ್ಯೂ ಬಾಬಿನಲ್ಲಿ ಜನರಿಗೆ ಎಂಥಾ ನಿರಾಶಾದಾಯಕವಾದ ಕೆಲಸ

* The Bill is reproduced as annexure to this volume.